# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 58/2025

ಪ್ರ.ವ.ಬೋ. ದಿನಾಂಕ -25-06-2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಮಾರುತಿ | ಫ್ರಾ.ಸಾ. | – | 04 |
| ತಂದೆಯ ಹೆಸರು | – | ಕಾಂತರಾಜು | ಚಾ.ಸಾ. | – | 08 |
| ವಯಸ್ಸು | – | 23 ವರ್ಷ | | | |
| ಉದ್ಯೋಗ | – | ಬಂಗಾರದ ಅಂಗಡಿಯಲ್ಲಿ ಕೆಲಸ | | | |
| ವಾಸ ಸ್ಥಳ | – | ಹಿರಿಯೂರು | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನಾನು ಸುಮಾರು 5 ವರ್ಷಗಳಿಂದ ಹಿರಿಯೂರಿನ ಗಾಂಧಿ ಸರ್ಕಲ್ ಬಂಬೂ ಬಜಾರ ರಸ್ತೆಯಲ್ಲಿರುವ ವಾಸವಿ ಜ್ಯುವೆಲರ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಸುಮಾರು ಒಂದು ವರ್ಷದ ಹಿಂದೆ ಹಿರಿಯೂರು ಪೋಲಿಸರು ಜವನಗೊಂಡನಹಳ್ಳಿಯಲ್ಲಿ ಬೈಪಾಸ್ ಪಕ್ಕ ಹೋಟೆಲ್ ಹತ್ತಿರ, ಬಂಗಾರವನ್ನು ತೂಕ ಮಾಡಿಸಲು ನನ್ನನ್ನು ಕರೆಯಿಸಿದ್ದರು. ನಾನು ಠಾಣೆಗೆ ಹೋಗಿದ್ದು, ಠಾಣೆಯಿಂದ  ಬೆಳಿಗ್ಗೆ 8 ಗಂಟೆಗೆ ನಾನು ಅಲ್ಲಿಗೆ ಹೋಗಿದ್ದು, ಅಲ್ಲಿ ಆರೋಪಿ ರಘು ಬಂಗಾರವನ್ನು ತೋರಿಸಿದ್ದು, ಅದನ್ನು ನಾನು ಬಂಗಾರದ್ದೋ ಅಲ್ಲವೋ ಎಂದು ಪರೀಕ್ಷೆ ಮಾಡಿದ್ದು, ಅದು ಬಂಗಾರದ್ದು ಎಂದು ತೂಕ ಮಾಡಿರುತ್ತೇನೆ.  ಬಂಗಾರದ ಎರಡು ಚೈನು, ಒಂದು ಜೊತೆ ಕಿವಿಯೋಲೆ ಇದ್ದವು. ಈ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ.  ಅದು ಎಷ್ಟು ತೂಕದ್ದು ಇದ್ದವು ಎಂದು ನನಗೆ ಈಗ ನೆನಪಿಲ್ಲ. ಅವುಗಳನ್ನು ಪೋಲಿಸರು ಮಹಜರ ಮಾಡಿ ಅಮಾನತಪಡಿಸಿಕೊಂಡಿರುತ್ತಾರೆ.  ಮಹಜರನ್ನು ಪೋಲಿಸರು

ಬರೆದಿರುತ್ತಾರೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಸದರಿ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ–19 ಎಂದು, ಸಾಕ್ಷಿಯ ಸಹಿಯನ್ನು ನಿಪಿ–19(ಎ) ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ವಿಡಿಯೋ ಮಾಡಿರುತ್ತಾರೆ. ಸದರಿ ವಿಡಿಯೋವನ್ನು ನೋಡಿದರೆ ಗುರುತಿಸುತ್ತೇನೆ.

**(ಬೆಳಗಿನ ಕಲಾಪ ಮುಗಿದಿದ್ದರಿಂದ, ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.